
ವ್ಯಕ್ತಿತ್ವವೇ ಅವಳ ಬದುಕಿನ ಕತ್ತಲೆಗೆ ದೊಂದಿಯನ್ನು ಹಿಡಿದು ಮುನ್ನಡೆಸುತ್ತದೆ.

ಸರಯೂ ಮುಂಬೈಗೆ ಸ್ಥಳಾಂತರಗೊಂಡ ನಂತರ ಕಥನ ಏಕಮುಖವಾಗಿ ಹರಿಯಲು ತೊಡಗುತ್ತದೆ. ಕಾರವಾರದಲ್ಲಿ ಅಲ್ಲಿನ ಪರಿಸರದ ಭಾಗವಾಗಿ ಕಾಣುತ್ತಿದ್ದ ಸರಯೂ, ಮುಂಬೈನಲ್ಲಿ ಅವಳ ಕಣ್ಣಿಂದಲೇ ನಮಗೆ ಎಲ್ಲವನ್ನೂ ಕಾಣಿಸಲು ತೊಡಗುತ್ತಾಳೆ. ಕಾರವಾರದಲ್ಲಿ ಆನಂದು, ಕೃಷ್ಣಿ, ಸರಯೂ, ಹೀಗೆ ಹಲವು ಧಾರೆಗಳಲ್ಲಿ ಹರಿಯುತ್ತಿದ್ದ ಕಥನ, ಮುಂಬೈಗೆ ಬಂದ ಮೇಲೆ ಸರಯೂ ಎಂಬ ಒಂದೇ ಧಾರೆಯಲ್ಲಿ ಹರಿಯತೊಡಗುತ್ತದೆ. ಅದು ಕಾದಂಬರಿಯ ಮಿತಿಯೂ ಆಗಿದೆ. ಅದರಲ್ಲಿಯೂ ಸರಯೂ ಮದುವೆ ಆಗುವುದು, ಮದುವೆ ಆದ ಮೇಲೆ ಅವಳ ಪಾತ್ರಚಿತ್ರಣ ಅವಳ ವ್ಯಕ್ತಿತ್ವವನ್ನು ಕುಗ್ಗಿಸಿದ ಹಾಗೆ ಅನಿಸುತ್ತದೆ. ಕೆಲಸಕ್ಕೆ ಸೇರಿದ ನಂತರ ಸರಯೂ ಗಳಿಸಿಕೊಳ್ಳುವ ಧೈರ್ಯ, ಆತ್ಮವಿಶ್ವಾಸಗಳು ಮದುವೆಯ ನಂತರ ಕಾಣೆಯಾಗಿ ಕುಟುಂಬಕ್ಕೆ ಸದ್ಗೃಹಿಣಿಯ ಪಾತ್ರಕ್ಕೆ ಸಂಪೂರ್ಣ ಶರಣಾಗಿಬಿಟ್ಟಂತೆ ಭಾಸವಾಗುತ್ತದೆ. ತನಗಿಂತ ವಯಸ್ಸಿನಲ್ಲಿ ತುಂಬ ದೊಡ್ಡವನಾದ, ವಿಧುರ ಅಂಕಿತ್‌ನನ್ನು ಮದುವೆಯಾಗುವ ನಿರ್ಧಾರವನ್ನು ಸ್ವತಂತ್ರವಾಗಿ ತೆಗೆದುಕೊಳ್ಳುವಷ್ಟು ಗಟ್ಟಿ ವ್ಯಕ್ತಿತ್ವದ ಸರಯೂ, ಮದುವೆಯ ನಂತರ ಎಲ್ಲಿಯೂ ಕಾಣಿಸುವುದೇ ಇಲ್ಲ. ಆಗೊಮ್ಮೆ ಈಗೊಮ್ಮೆ ಅವಳ ಈ ಗಟ್ಟಿತನದ ಬೆಳಕು ಮಿಂಚಿ ಮರೆಯಾಗುತ್ತದೆಯೇ ವಿನಾ, ಅದು ಅವಳ ಬದುಕನ್ನು ನಿರ್ದೇಶಿಸುವಷ್ಟು ಗಟ್ಟಿಯಾಗಿ ಬೆಳೆದಿಲ್ಲ.

‘ನಾನೂ ಹುಡುಗರಂತೆ ಕೆಲಸ ಮಾಡುತ್ತೇನಪ್ಪಾ… ‘ಅನಘಾ ಎಂಟರಪ್ರೈಸ್’, ‘ಅನಘಾ ಇಂಡಸ್ಟ್ರೀಸ್’, ಮತ್ತೆ ‘ಸ್ನೇಹಲ್ ಬೂಟಿಕ್’ ಇವೆಲ್ಲಾ ನಮ್ಮ ಕಂಪೆನಿಯ ಹೆಸರುಗಳು. ಆದರೆ ಅವುಗಳನ್ನು ಮುನ್ನಡೆಸುವ ಚುಕ್ಕಾಣಿಗಳಲ್ಲಿ ದೊಡ್ಡ ಚುಕ್ಕಾಣಿ ನನ್ನ ಕೈಯಲ್ಲೇ ಇದೆ’ ಎಂದು ಕಾದಂಬರಿಯ ಆರಂಭದಲ್ಲಿಯೇ ಸರಯೂ ಹೇಳುತ್ತಾಳೆ. ಆದರೆ ಸಂಸಾರದ ಒಳಗಿನ ವಿಷಯಗಳಲ್ಲಿ, ಅನುದಿನದ ನಿರ್ಧಾರಗಳಲ್ಲಿ ಅವಳ ಈ ಗಟ್ಟಿತನ ಕಾಣಿಸುವುದೇ ಇಲ್ಲ. ಮಗಳಿಗಾಗಿ ಪರಿತಪಿಸುತ್ತ, ಸರಯೂಳನ್ನು ನಿರ್ಲಕ್ಷಿಸುತ್ತಿರುವ ಗಂಡ ಅಂಕಿತ್‌ನನ್ನು ಎದುರಿಸುವ ವಿಷಯದಲ್ಲಾಗಲಿ, ಸ್ನೇಹಲ್‌ನೊಂದಿಗಿನ ಸಂಬಂಧದಲ್ಲಾಗಲಿ, ಅವಳು ತ್ಯಾಗಮಯಿ,




**ನೀಲಿ ನಕ್ಷೆ** ಲೇ: ಅಮಿತಾ ಭಾಗವತ್,
ಪು: 312; ಬೆ: ರೂ. 350, ಪ್ರ: ಅಂಕಿತ ಪುಸ್ತಕ,
ಬೆಂಗಳೂರು, ಫೋನ್: 9019190502,
ವೆಬ್‌ಸೈಟ್:ankitapustaka.com

ಅಸಹಾಯಕ ಹೆಣ್ಣಾಗಿ ಕಾಣಿಸುತ್ತಾಳೆಯೇ ವಿನಾ ಗಟ್ಟಿ ವ್ಯಕ್ತಿತ್ವ ಪ್ರಕಟಗೊಂಡಿಲ್ಲ.

ಈ ಭಾಗದಲ್ಲಿ ಸಾಕಷ್ಟು ಅನವಶ್ಯಕ ಅನಿಸುವಂಥ ವಿವರಗಳು ಸೇರಿಕೊಂಡಿವೆ. ಅವು ಇಲ್ಲದಿದ್ದರೂ ಕಾದಂಬರಿಯ ಕಥನ ಜಗತ್ತಿಗೆ ಏನೂ ತೊಂದರೆ ಆಗುತ್ತಿರಲಿಲ್ಲ. ಹಲವು ಕಡೆಗಳಲ್ಲಿ ಅದು ಸರಯೂಳ ದಿನಚರಿಯ ವಿವರಣೆಯಷ್ಟೇ ಆಗಿ ಕಾಣಿಸುತ್ತದೆ. ಕಥೆಯನ್ನು ‘ದಡ’ ಮುಟ್ಟಿಸುವ ಅವಸರವೂ ಕಾದಂಬರಿಯ ಕೊನೆಯ ಭಾಗವನ್ನು ಕೊಂಚ ಜಾಳು ಜಾಳಾಗಿಸಿದ ಹಾಗಿದೆ.

ಮಿತಿಗಳ ನಡುವೆಯೂ ಸರಾಗ ಓದಿನ ಮೂಲಕ ಒಂದು ಗಾಢವಾದ ಅನುಭವವನ್ನು ಕೊಡುವ ಕಾದಂಬರಿ ‘ನೀಲಿ ನಕ್ಷೆ’. ಅಮಿತಾ ಅವರು ತಮ್ಮ ಮೊದಲ ಕಾದಂಬರಿಯಲ್ಲಿಯೇ ಕಾದಂಬರಿ ಪ್ರಕಾರದ ಬಗ್ಗೆ ಹಿಡಿತ ಸಾಧಿಸಿರುವುದು ತಿಳಿಯುತ್ತದೆ. ಇದರಲ್ಲಿ ಸಡಿಲ ಬಿಟ್ಟ ಎಳೆಗಳನ್ನೆಲ್ಲ ಬಿಗಿಗೊಳಿಸಿಕೊಂಡರೆ ಅವರಿಂದ ಖಂಡಿತ ಉತ್ತಮ ಕಾದಂಬರಿಗಳನ್ನು ನಿರೀಕ್ಷಿಸಬಹುದು. ●